**ಸಿ.ಸಿ. ನಂಃ137/2021**
**ಡಿಡಬ್ಲೂಃ01**

**ದಿಃ 22-02-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**
**ಪಾಟೀ ಸವಾಲುಃ ಪಿರ್ಯಾದಪರ ವಕೀಲರಿಂದ**

ವಿಜಯ ಎಂಬುವವರು ನನಗೆ ಚಿಕ್ಕವನಿಂದಾಗಿನಿಂದ ಪರಿಚಯ. ಸದರಿಯವರು ಬರದೂರಿನಲ್ಲಿ ಇರುತ್ತಾರೆ. ಸದರಿಯವರು ನಮ್ಮ ಹತ್ತಿರ ಜೆಸಿಬಿ ಯಲ್ಲಿ 3 ವರ್ಷ ಕೆಲಸ ಮಾಡಿರುತ್ತಾರೆ. ನಾನು ವಿಜಯ ಅವರಿಗೆ ಚೆಕ್ಕು ಮತ್ತು ಬಾಂಡ್ ಗಳನ್ನು ಕೊಟ್ಟ ದಿನಾಂಕ ನೆನಪು ಇಲ್ಲ. ನಾನು ಅವರ ಹತ್ತಿರ ಹಣ ತೆಗೆದುಕೊಂಡಿದ್ದಕ್ಕಾ ಗಿ ಅವರಿಗೆ ಕೊಟ್ಟಿರುತ್ತೇನೆ. ಅವರಿಗೆ ಹಣವನ್ನು ಮರುಪಾವತಿ ಮಾಡಿರುತ್ತೇನೆ, ಆದರೆ ಕೊಟ್ಟ ಚೆಕ್ಕುಗಳನ್ನು ತೆಗೆದುಕೊಂಡಿರುವುದಿಲ್ಲ. ಅವರೊಂದಿಗೆ ಒಡನಾಟ ಇದ್ದ ಕಾರಣ ಅವರಿಗೆ ಕೊಟ್ಟ ಚೆಕ್ಕನ್ನು ತೆಗೆದುಕೊಂಡಿರುವುದಿಲ್ಲ. ಅವರಿಗೆ ಕೊಟ್ಟ ಚೆಕ್ಕುಗಳನ್ನು ಮರಳಿ ಕೊಡುವಂತೆ ನಾನು ಕೇಳಿರುವುದಿಲ್ಲ. ಪಿರ್ಯಾದಿದಾರರು ಮತ್ತು ವಿಜಯ ಇವರು ಒಂದೇ ಊರಿನವರು ಎಂದರೆ ಗೊತ್ತಿಲ್ಲ. ಪಿರ್ಯಾದಿದಾರರ ಮೂಲಕ ನನಗೆ ಪಿರ್ಯಾದಿದಾರರು ಪರಿಚಯ ಆಗಿರುವುದಿಲ್ಲ. ಚೆಕ್ಕಿನ ಮೇಲೆ ಇರುವ ಸಹಿ ನನ್ನದೆ ಇರುತ್ತದೆ.

**2.** ನನಗೆ ಇಬ್ಬರು ತಂಗಿಯರು ಇದ್ದಾರೆ. ಅದರಲ್ಲಿ ಒಬ್ಬರು ಕೆ.ಸಿ.ಸಿ. ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾರೆ. ಅವರು ಯಾವಾಗ ಕೇಲಸಕ್ಕೆ ಸೇರಿದ್ದಾರೆ ಎಂದು ನೆನಪು ಇಲ್ಲ. ಸುಮಾರು 4-5 ವರ್ಷಗಳಿಂದ ಕೇಲಸ ಮಾಡುತ್ತಿದ್ದಾರೆ. ನನ್ನ ತಂಗಿಯನ್ನು ಕೇಲಸಕ್ಕೆ ಸೇರಿಸಲು ಮತ್ತು ಮನೆತನದ ಕೇಲಸಕ್ಕಾಗಿ ಹಣದ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ. ನನಗೆ ಹಣದ ಅಡಚಣೆ ಇದ್ದ ಕಾರಣ ಪಿರ್ಯಾದಿ ಕಡೆಯಿಂದ 2 ಲಕ್ಷ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನ ವ್ಯವಹಾರ ನನಗೆ ಅಷ್ಟಾಗಿ ಗೊತ್ತಿಲ್ಲ. ನಾನು ಪಿರ್ಯಾದಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ,** **ನನ್ನ ಸಮಕ್ಷಮ**

**(ವೀರೇಶ ಕುಮಾರ ಸಿ.ಕೆ.)**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,**
**ಹಡಗಲಿ.**